**ಕರ್ನಾಟಕ ಸರ್ಕಾರ**
**ಅಪರ ಆಯುಕ್ತರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಕಲಬುರಗಿ**

**ಸಂಖ್ಯೆ: ಸಿ2(2)ಆಡಳಿತ/ಕಾ.ಸ್ವ.ಹೆ.ಬಡ್ತಿ/05/2024-25(II)** **ದಿನಾಂಕ: 15/04/2025**

ಜ್ಞಾಪನ

ವಿಷಯ: ಶಾಲಾ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-'ಬಿ' ವೃಂದದ ಅಧಿಕಾರಿಗಳಿಗೆ 15 ವರ್ಷಗಳ ಸ್ವಯಂಚಾಲಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 250 ಡಿಪಿಐ 2006 ದಿನಾಂಕ: 22/07/2008.
2) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 464 ಡಿಪಿಐ 2008 ದಿನಾಂಕ: 06/01/2009.
3) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 31 ಎಸ್‌ರ್‌ಪಿ 2007() ದಿನಾಂಕ: 14/08/2008.
4) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 30 ಎಸ್‌ರ್‌ಪಿ 2012 ದಿನಾಂಕ: 31/01/2014
5) ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 25 ಎಸ್‌ಆರ್‌ಪಿ 91 ದಿನಾಂಕ: 29/10/1991.
6) ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡುವಳಿಗಳು ದಿನಾಂಕ: 01/02/2025.

ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಇವರನ್ನು ಉಲ್ಲೇಖ (1)ರನ್ವಯ ಶಾಲಾ ಶಿಕ್ಷಣ ಇಲಾಖೆಯ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ನೇಮಕಾತಿ ಪ್ರಾಧಿಕಾರವೆಂದು ನೇಮಿಸಿ ಆದೇಶಿಸಿದೆ. ಸದರಿ ಗ್ರೂಪ್-'ಬಿ' ಅಧಿಕಾರಿಗಳಿಗೆ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರು ಮಾಡಲು ನೇಮಕಾತಿ ಪ್ರಾಧಿಕಾರವೇ ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಗ್ರೂಪ್-'ಬಿ' ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಹುದ್ದೆಯಲ್ಲಿ ಯಾವುದೇ ಮುಂಬಡ್ತಿ ಇಲ್ಲದೆ ಸತತವಾಗಿ 15 ವರ್ಷಗಳ ಸೇವೆ ಪೂರ್ಣಗೊಳಿಸಿರುವ ಅಧಿಕಾರಿಗಳು/ನೌಕರರು ಸಮುಚಿತ ಮಾರ್ಗದ ಮುಖಾಂತರ ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ಬಡ್ತಿ ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಿರುವರು. ಪ್ರಸ್ತಾವನೆಗಳನ್ನು ದಿನಾಂಕ: 01/02/2025 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಉಲ್ಲೇಖ (5)ರ ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ವಿಶೇಷ ಬಡ್ತಿ ನಿಯಮಗಳಡಿ ಪರಿಶೀಲಿಸಿ, ನಿಯಮಗಳಡಿ ವಿಧಿಸಿರುವ ಷರತ್ತು/ನಿಬಂಧನೆಗಳಿಗೊಳಪಟ್ಟು ಈ ಕೆಳಕಂಡ ಅಧಿಕಾರಿಗಳಿಗೆ ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರು ಮಾಡುವ ಕುರಿತು ನಿರ್ಣಯಿಸಿರುತ್ತಾರೆ. ಇಲಾಖಾ ಮುಂಬಡ್ತಿ ಸಮಿತಿ ಸಭೆಯ ನಿರ್ಣಯ ಹಾಗೂ ನಡವಳಿಯನ್ವಯ, ಸ್ವಯಂ ಚಾಲಿತ ವೇತನ ಬಡ್ತಿಗೆ ಅರ್ಹರಿರುವ ಈ ಕೆಳಕಂಡ ಗ್ರೂಪ್-'ಬಿ' ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಅಧಿಕಾರಿಗಳಿಗೆ ಅನುಬಂಧ-1 ರಲ್ಲಿ ಕಾಣಿಸಿದಂತೆ ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ಬಡ್ತಿ ಮಂಜೂರು ಮಾಡಿ ವೇತನ ನಿಗದಿಪಡಿಸಿದೆ.

(ಡಾ. ಆಕಾಶ್ ಎಸ್) ಭಾ.ಆ.ಸೇ
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ

ಪ್ರತಿಯನ್ನು:

1) ಮಹಾಲೇಖಪಾಲರು(ಲೆ&ಹ), ಕರ್ನಾಟಕ ಪಾರ್ಕ ಹೌಸ್ ರೋಡ್ ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
3) ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಧಾರವಾಡ.
4) ಉಪ ನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ,ಕಲಬುರಗಿ ಮತ್ತು ಯಾದಗಿರಿ..
5) ಸಂಬಂಧಿಸಿದ ಡಯಟಗಳ ಉಪನಿರ್ದೇಶಕರು(ಅಭಿವೃದ್ಧಿ)ರವರಿಗೆ.

**ಕರ್ನಾಟಕ ಸರ್ಕಾರ**
**ಅಪರ ಆಯುಕ್ತರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಕಲಬುರಗಿ**

**ಸಂಖ್ಯೆ: ಸಿ2(2)ಆಡಳಿತ/ಕಾ.ಸ್ವ.ಹೆ.ಬಡ್ತಿ/05/2024-25(II)** **ದಿನಾಂಕ: 15/024/2025**

**ಅನುಬಂಧ-1**

ಕಲಬುರಗಿ ವಿಭಾಗದಲ್ಲಿ ಗ್ರೂಪ್-'ಬಿ' ವೃಂದದ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳು ಸದರಿ ಹುದ್ದೆಯಲ್ಲಿ ಮುಂಬಡ್ತಿ ಇಲ್ಲದೆ ಸತತವಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ಬಡ್ತಿ ಮಂಜೂರು ಮಾಡಿದ ವಿವರ

| ಕ್ರ ಸ | ಅಧಿಕಾರಿ ಹೆಸರು ಹುದ್ದೆ ವಿಳಾಸ | ನೇಮಕಾತಿ/ ಸೇವಾ ಸಕ್ರಮ/ ಬಡ್ತಿ ಹೊಂದಿದ ದಿನಾಂಕ | ಪರಿವೀಕ್ಷಣಾ ಅವಧಿ ಘೋಷಣೆ ದಿನಾಂಕ | ಸ್ವಯಂ ಚಾಲಿತ ಬಡ್ತಿಗೆ ಅರ್ಹತಾ ದಿನಾಂಕ | ಪ್ರಸ್ತುತ ಪಡೆಯುತ್ತಿರುವ ವೇತನ ಹಾಗೂ ವೇತನ ಶ್ರೇಣಿ | ಕಾಲಮಿತಿ ವೇತನ ಬಡ್ತಿ ನಂತರದ ವೇತನ ಮತ್ತು ಶ್ರೇಣಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಸಿದ್ದಪ್ಪ ಬಿ ಮಾನಸುಣಗಿ, ನಿವೃತ್ತ ಮುಖ್ಯ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ನಾಗನಟಗಿ, ತಾ: ಶಹಾಪೂರ, ಜಿ: ಯಾದಗಿರಿ. | 04-09-1986 (ಗುತ್ತಿಗೆ ಆ) 20-02-1991 (ಸಕ್ರಮ ದಿ.) 07/01/2006 (ಮು.ಶಿ ಬಡ್ತಿ) 07-05-1993 Gr-1 | 20-02-1993 (ಸಹ ಶಿಕ್ಷಕರ ಹುದ್ದೆಯಲ್ಲಿ) | 07-05-2021 | 74400 [43100-83900] | 76300 [45300-88300] |
| 2 | ದೌಲಪ್ಪ ಆನಂದಿ, ನಿವೃತ್ತ ಮುಖ್ಯ ಶಿಕ್ಷಕರು, ಸರಕಾರಿ ಉರ್ದು ಪ್ರೌಢ ಶಾಲೆ ರೋಜಾತೈನ ಪಾಚಾಪೂರ, ತಾ: ಜಿ: ಕಲಬುರಗಿ. | 16/08/1982 (ಸಹ ಶಿಕ್ಷಕ) 24/09/1999 (ಮು.ಶಿ ಬಡ್ತಿ) | 06-05-2003 (ಸಹ ಶಿಕ್ಷಕರ ಹುದ್ದೆಯಲ್ಲಿ) | 24-09-2014 | 40050 [22800-43200] | 41100 [22800-43200] |
| 3 | ಕಟ್ಟಿಮನಿ ಎಸ್ ಆರ್ ನಿವೃತ್ತ ಮುಖ್ಯ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ ಕಪನೂರ, ತಾ: ಜಿ: ಕಲಬುರಗಿ. | 01.01.1990 (ಸಹ ಶಿಕ್ಷಕ) 05/05/2005 (ಮು.ಶಿ ಬಡ್ತಿ) | 06-01-1992 (ಸಹ ಶಿಕ್ಷಕರ ಹುದ್ದೆಯಲ್ಲಿ) | 05-05-2020 | 72500 [43100-83900] | 74400 [45300-88300] |

(ಡಾ. ಆಕಾಶ್ ಎಸ್. ಭಾ.ಆ.ಸೇ)
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ